# ಎರಡು ಹಿಂದಿ ಕಥೆಗಳು

■ ಕನ್ನಡಕ್ಕೆ: **ಡಾ. ಎಚ್.ಎಂ. ಕುಮಾರಸ್ವಾಮಿ**



# ಆಸರೆ

■ ಮೂಲ: **ಹೇಮ ಕುಮಾರ್ ಕುರ್ಮಿ**

ಮೀನಾ ಸಾಂಬಾರಿಗೆ ಒಗ್ಗರಣೆ ಹಾಕಿ ಅಡುಗೆ ಮನೆಯ ಕಿಟಕಿಯನ್ನು ತೆರೆದಳು. ಒಗ್ಗರಣೆಯ ಪರಿಮಳ ಪಕ್ಕದ ಮನೆಯವರ ಮೂಗನ್ನು ಅರಳಿಸಿತು. ಮೀನಾರವರು ಯಾವುದೋ ವಿಶೇಷವಾದ ಸಾಂಬಾರು ಮಾಡುತ್ತಿದ್ದಾರೆಂದು ಯಾರಾದರೂ ಅಂದುಕೊಳ್ಳಬಹುದಿತ್ತು. ಇದು ವಿಶೇಷವೇ. ಏಕೆಂದರೆ, ಮೀನಾಳ ಅಡುಗೆಯನ್ನು ಎಲ್ಲರೂ ಹೊಗಳುತ್ತಿದ್ದರು. ಪತಿ ಪ್ರಣವ್ ಪಟೇಲ್ ಕೂಡ ಆಗಾಗ ಪತ್ನಿಯನ್ನು ಹೊಗಳುತ್ತಿದ್ದರು.

ಪ್ರಣವ್ ವರಂಡಾದಲ್ಲಿ ಕುಳಿತು ಪತ್ರಿಕೆ ಓದುತ್ತಿದ್ದರು. ಆ ಹೊತ್ತಿಗೆ ಬಾಗಿಲಿನ ಕರೆಗಂಟೆ ಸದ್ದಾಯಿತು. 'ಯಾರು ಬಂದಿದ್ದಾರೆ ಅಂತ ನೋಡು ಮೀನಾ' ಎಂದು ಪ್ರಣವ್ ಕೂಗಿದರು. 'ಅರೆ., ಪಟೇಲ್ ಸಾಹೇಬರೇ ನಾನು ಅಡುಗೆ ಮನೆಯಲ್ಲಿ ಬ್ಯುಸಿ ಆಗಿರೋದು ತಮಗೆ ಕಾಣೋದಿಲ್ವೆ? ನೀವೇ ಹೋಗಿ ಬಾಗಿಲು ತೆಗೀರಿ. ನೀವು ಬಾಗಿಲು ತೆರೆದ್ರೆ ಅದು ಕೂಡ ತಮ್ಮ ಸ್ಪರ್ಶದಿಂದ ಧನ್ಯನಾದೆ ಅಂದುಕೊಳ್ಳುತ್ತೆ' ಎಂದು ಮೀನಾ ಛೇಡಿಸಿದಳು.

ಪ್ರಣವ್ ಬಾಗಿಲು ತೆರೆದಾಗ ಪಕ್ಕದ ಮನೆಯ ಸುಂದರಲಾಲ್ ನಿಂತಿದ್ದರು. 'ಅರೇ, ತಾವು...! ಬೆಳ್ಳಂಬೆಳಿಗ್ಗೇನೆ ಏನಾದ್ರೂ ದಾರಿ ಮರೆತು ನಮ್ಮ ಮನೇಕಡೆ ಬಂದಿದ್ದೀರೇನು?'

'ಇಲ್ಲಪ್ಪ. ಅಂಥದ್ದೇನೂ ಇಲ್ಲ. ಬದುಕಿನ ಈ ಜಂಜಾಟದಲ್ಲಿ ಸಮಯವೇ ಸಿಗುವುದಿಲ್ಲ ನೋಡಿ...' ಸುಂದರಲಾಲ್ ನಕ್ಕರು.

'ಆಯ್ತು ಆಯ್ತು ನಿಂತೇ ಇದ್ದೀರಲ್ಲ... ಒಳಗೆ ಬನ್ನಿ...'

ಇಬ್ಬರೂ ಹೋಗಿ ಗೆಸ್ಟ್ ರೂಮಿನಲ್ಲಿ ಕುಳಿತರು.

'ಸುಂದರಲಾಲ್ ಸಾಹೇಬರು ಬಂದಿದ್ದಾರೆ. ತಿಂಡಿ, ಚಹಾ ತಗೊಂಡು ಬಾ...' ಪ್ರಣವ್ ಮೀನಾಳಿಗೆ ಹೇಳಿದರು.

ಇಬ್ಬರೂ ಪರಸ್ಪರ ಉಭಯ ಕುಶಲೋಪರಿಯಲ್ಲಿ ತೊಡಗಿದರು.

'ಅಣ್ಣಾ, ನೀವು ನಮ್ಮ ಮನೆಗೆ ಬಂದು ತುಂಬಾ ಸಮಯ ಆಯ್ತು' ಎಂದು ಮೀನಾ ತಿಂಡಿ ತಟ್ಟೆಗಳನ್ನು ಮುಂದಿಡುತ್ತಾ ಹೇಳಿದಳು.

'ಹಾಂ ಅತ್ತಿಗೆ, ತುಂಬಾ ಕೆಲಸ ಇತ್ತು, ಬರೋಕಾಗ್ಲಿಲ್ಲ. ಆದ್ರೆ ನಾನು ನಿಮ್ಮ ಮನೆಗೆ ಬರದೇ ಇದ್ರೂ ನೀವು ಮಾತ್ರ ಎಲ್ಲರ ಮನೆಗೂ ತಲುಪಿಬಿಡ್ತೀರಿ...'

ಒಂದು ಕ್ಷಣಕ್ಕೆ ಮೀನಾ ಗಲಿಬಿಲಿಗೊಂಡಳು. ಮರುಕ್ಷಣದಲ್ಲಿಯೇ ಕೇಳಿದಳು, 'ಅದು ಹೇಗೆ ಅಣ್ಣಾ'.

'ಅತ್ತಿಗೆ... ನಿಮ್ಮ ಅಡುಗೆಮನೆಯ ಒಗ್ಗರಣೆ ಪರಿಮಳ ಪ್ರತಿ ದಿನ ಅಕ್ಕಪಕ್ಕದ ಎಲ್ಲಾ ಮನೆಗಳಿಗೂ ತಲುಪಿಬಿಡುತ್ತೆ. ಆಗ ನೀವು ತಲುಪಿದ ಹಾಗೆ ತಾನೇ? ಹಾಂ, ನೀವು ಇವತ್ತು ಆಲೂಬೋಂಡಾ ಮಾಡಿದ್ದೀರಿ ಅಲ್ಲವೆ?'

'ಅರೆ ವಾಹ್! ನಿಮಗೆ ಹ್ಯಾಗೆ ಗೊತ್ತಾಯ್ತು?'

'ಅದರ ಪರಿಮಳವನ್ನು ಈಗಾಗಲೇ ಅಕ್ಕಪಕ್ಕದವರು ಆಘ್ರಾಣಿಸಿದ್ದಾರೆ ಅತ್ತಿಗೆ'.

ಇದಕ್ಕೆ ಪ್ರಣವ್ ಕೂಡ ದನಿಗೂಡಿಸಿದರು. 'ಸತ್ಯ ಹೇಳಬೇಕಂದ್ರೆ, ನನ್ನ ಹೆಂಡತಿಯ ಕೈಗಳಲ್ಲಿ ಒಂಥರಾ ಜಾದೂ ಇದೆ ಸುಂದರಲಾಲ್. ನೀವೂ ಕೂಡ ಆದಷ್ಟು ಬೇಗ ಮದುವೆ ಮಾಡಿಕೊಂಡುಬಿಡಿ. ನಾವೂ ಕೂಡ ಆಗಾಗ ನಿಮ್ಮ ಮನೆಗೆ ಬಂದು ಚಹಾ ಕುಡಿಯಬಹುದು...' ಎಂದು ಪ್ರಣವ್ ತಮಾಷೆ ಮಾಡಿದರು.

ಪ್ರಣವ್‌ರನ್ನು ತಡೆದು ಮೀನಾ ಹೇಳಿದಳು, 'ಸಾಕು ಸುಮ್ನಿರಿ. ಜಾಸ್ತಿ ಬೆಣ್ಣೆ ಹಚ್ಚಬೇಡಿ...'

ಆಕೆ ಪರಿಸ್ಥಿತಿ ಕೈಮೀರಿ ಹೋಗದಂತೆ ತಿಳಿಗೊಳಿಸಲು ಪ್ರಯತ್ನಿಸುತ್ತಿದ್ದಳು. ವಾಸ್ತವವಾಗಿ ಎರಡು ವರ್ಷಗಳ ಹಿಂದೆ ಸುಂದರಲಾಲ್‌ರ ಪತ್ನಿ ತೀರಿಕೊಂಡಿದ್ದಳು. ತನ್ನ ಗಂಡ ಪ್ರಣವ್ ಆ ಹಳೇ